

# ರಮ್ಯಾಳನ್ನು ವರಿಸಿದ ಅಜಯ್

ತನ್ನ ಆತುರದ ನಿರ್ಧಾರಕ್ಕೆ ಮನಸ್ಸು ಪರಿತಪಿಸಿತು. ಮೊಬೈಲು ಇನ್ನೂ ರಿಂಗ್ ಆಗುತ್ತಲೇ ಇತ್ತು. ರಮ್ಯಾಳೇ ಮೇಲೆದ್ದು ಅದನ್ನು ತೆಗೆದುಕೊಂಡಳು. ಹೇಮಂತ ಲೈನಿನಲ್ಲಿದ್ದ. ಅವನು ಆತಂಕಗೊಂಡಿದ್ದಾನೆಂದು ಅವನ ಧ್ವನಿಯೇ ಹೇಳಿತು. ಋತುವಿನಿಂದ ತನಗೆ ಬಂದ ಸಂದೇಶದ ಬಗ್ಗೆ ಹೇಳಿದ.

'ಹೇಮಂತ್, ಏನೂ ಗಾಬರಿ ಬೇಡ, ಋತು ಸೇಫಾಗಿದ್ದಾಳೆ, ಆಗೋ ಅನಾಹುತ ನಿಮ್ಮ ಮೊಬೈಲ್ ಕಾಲ್‌ನಿಂದ ತಪ್ಪಿದೆ. ನಿಮ್ಮಿಬ್ಬರ ಪ್ರೀತಿಯೇ ಅವಳನ್ನು ಈ ದಿನ ಉಳಿಸಿದೆ...' ಎಂದ ರಮ್ಯ ಋತು ನೇಣು ಹಾಕಿಕೊಳ್ಳುವ ಪ್ರಯತ್ನದಲ್ಲಿದ್ದುದನ್ನು ಹೇಳಿದಳು.

'ಮೈ ಗಾಡ್....ಇವತ್ತು ನೀವು ಋತುವಿನ ಜೊತೆ ಇರದಿದ್ರೆ ಖಂಡಿತಾ ಅವಳನ್ನು ಉಳಿಸಿಕೊಳ್ಳಲಾಗ್ತಿರಲಿಲ್ಲ. ಈ ಋತು ಬುದ್ಧಿಯಿಲ್ದೆ ಯಾಕೆ ಹೀಗೆಲ್ಲಾ ಬಿಹೇವ್ ಮಾಡ್ತಾಳೋ ಗೊತ್ತಿಲ್ಲ....' ಹೇಮಂತನೂ ಪೇಚಾಡಿಕೊಂಡ.

'ಮೊದ್ಲು ನೀವು ಅವಳನ್ನು ಏಕಾಂತವಾಗಿ ಭೇಟಿ ಮಾಡಿ ಹೇಮಂತ್,